ಸೊರಬ ತಾಲ್ಲೂಕಿನಲ್ಲಿ ಶಿಡ್ಡಿಹಳ್ಳಿ ಗ್ರಾಮದ ಪತ್ರ ಪ್ಯಾರ್ಟೀರ್ಷ ಗೋಸ್ಕರ ತೆಗದುಕೊಂಡ ಜಾಗ ಚತುರ್ಗಡಿ.

ಉತ್ತರಕ್ಕೆ—ಶಿಡ್ಡಿಹಳ್ಳಿ ಗ್ರಾಮದ ನಂಬರ್ 232ನೇ ಕೆರೆ ಮತ್ತು ಸಾಗುವಳಿ ಜಮೀನು ಸಹ.

ಪೂರ್ವಕ್ಕೆ—ಶಿಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 62ರ ಜಾಗ ಮತ್ತು ಗ್ರಾಮ ಸಹ.

ದಕ್ಷಿಣಕ್ಕೆ—ತಾಳಗುಪ್ಪೆ ಜಂಗಲ್ ಸರ್ವೆ ನಂಬರ್ 20.

ಪಶ್ಚಿಮಕ್ಕೆ—ಶಿಡ್ಡಿಹಳ್ಳಿ ಜಂಗಲಿಯ ಸರ್ವೆ ನಂಬರ್ 2.

ಯಿವರ ಅಳತೆ 560 ಯಕರೆ.

ಎಲ್. ರೈಸ್,
ಫಾರೆಸ್ಟ್ಸ್ ಇನ್‌ಸ್ಪೆಕ್ಟರ್ ಜನರಲ್.

ನೋಟಿಫಿಕೇರ್ಷ.

ತಾರೀಖು 18ನೇ ಜನವರಿ 1888.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ ೧೮೭೮ನೇ ಇಸವಿ ಜೂ॥ 8ನೇ ತಾರೀಖಿನ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷರ್ಷ ಅನುಸಂಧಿ ಈ ಕೆಳಗೆ ನಮೂದಿಸಿ ಯಿರುವ ವೈಟ್ ಫಾರೆಸ್ಟುಗಳು ಮತ್ತು ಪ್ಯಾರ್ಟೀರ್ಷಗಳು 1889ನೇ ಇಸವಿ ಮೇ ಆಯ್ಬೈರವರಿಗಿನ ಬಿಸಲುಕಾಲದಲ್ಲಿ ಬಂದ್ ಮಾಡಲ್ಪಟ್ಟಿರುತ್ತದೆ, ಈ ಮೇಲ್ಕಂಡ ಅವಯ್ಯಾವಿನಲ್ಲಿ ಯಾವ ವಿಧವಾದ ಸಿಕಾರಿಯೂ ನಿರೋಧಿಸಲ್ಪಟ್ಟಿದೆ, ಅತಿಕ್ರಮ ಪ್ರವೇಕಮಾಡುವವರು ಪ್ರಾಸಿಕ್ಯೂಷನಿಗೆ ಒಳಪಟ್ಟಾರು.

ನಂಬರು.	ಸ್ಟೇಟ್ ಫಾರೆಸ್ಟ್ ವ ಪ್ಯಾರ್ಟೀರ್ಷ ಹೆಸರು.	ತಾಲ್ಲೂಕು.
1	ಲಕ್ಕವಳ್ಳಿ ಸಾಗುವಾನೀ ಪ್ಯಾರ್ಟೀರ್ಷ	ತರಿಕೆರೆ
2	ಡಿಟೋ ಸ್ಟೇಟ್ ಫಾರೆಸ್ಟ್	ಡಿಟೋ
3	ಕರಡಿಹಳ್ಳಿ ಪ್ಯಾರ್ಟೀರ್ಷ	ಚಿಕ್ಕಮಗಳೂರು
4	ಮಟ್ಟಾವಾರ ನಂಬರ್ ರಿಜರ್ವ್	ಡಿಟೋ
5	ಹೆಬ್ಬೈ ಪ್ಯಾರ್ಟೀರ್ಷ	ಎಡೆಹಳ್ಳಿ ಸಬ್ ತಾಲ್ಲೂಕು

ವೈ. ಸೀತಾರಾಮಯ್ಯ,
ಸಬ್ ಅಸಿಸ್ಟೆಂಟ್ ಕಾರ್ಸರವೇಟರ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 78.

ಬೆಂಗಳೂರು ತಿಗಳಪ್ಯಾಟೇಲಿ ಇದ್ದು ಮೃತಪಟ್ಟ ಅಂಡಿಮುನಿಸಾಮಪ್ಪನ ಆಸ್ತಿ ವಿಷಯದಲ್ಲಿ—

ಅರ್ಜಿದಾರು) ದೊಡ್ಡಮುತ್ತಯ್ಯ ಮೈನರ್, ಗಾರ್ಡಿಯರ್ ಹುಚ್ಚಮ್ಮ ಮೃತಪಟ್ಟ ಸದರೀ ಮುನಿಸಾಮಪ್ಪನಿಗೆ ಮೈನರನು ಮಗನು ಆಗಬೇಕೆಂಬ ಹಕ್ಕುದಾರಿ ನೇಲೆ ಬೆಂಗಳೂರು ಸ್ಥಳದ ದೊಡ್ಡ ಮುತ್ತಯ್ಯನ ಗಾರ್ಡಿಯರ್ ಹುಚ್ಚಮ್ಮ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಮುನಿಸಾಮಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ವರಖಾಸ್ತುದಾರಳಾದ ಹುಚ್ಚಮ್ಮನ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 15 ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ಮಿಮರ್ಕ ಮಾಡಲ್ಪಡುತ್ತೆ. ಆ ಕಾಲವಲ್ಲಿ ಸದರೀ ಮೃತಪಟ್ಟ ಮುನಿಸಾಮಪ್ಪನ ಆಸ್ತಿಗೆ ಹಕ್ಕುದಾರರಾದ ವಿರುದ್ಧರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಅರ್ಜಿ ನಂಬರ್ 1136.

ದೊಡ್ಡಬಳ್ಳಾಪುರದಲ್ಲಿ ಇದ್ದು ಮೃತಪಟ್ಟ ದೇವಾಂಗದ ದೊಡ್ಡನಂಜುಂಡಪ್ಪನ ಆಸ್ತಿ ವಿಷಯಲ್ಲಿದ—

ಅರ್ಜೀದಾರು) ನಂಜುಂಡಪ್ಪ ಮರಿಯಪ್ಪ ಸಹ ಮೃತಪಟ್ಟ ಸದರೀ ದೊಡ್ಡನಂಜುಂಡಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ದೊಡ್ಡ ಬಳ್ಳಾಪುರ ಸ್ಥಳದ ನಂಜುಂಡಪ್ಪ, ಮರಿಯಪ್ಪ ಸಹ ದೊಡ್ಡ ಬಳ್ಳಾಪುರ ವಾಸಸ್ಥರಾಗಿ ಮೃತಪಟ್ಟ ದೊಡ್ಡನಂಜುಂಡಪ್ಪನ ಜಿಂ

ದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜುಂಡಪ್ಪ, ಮರಿಯಪ್ಪನ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡನಂಜುಂಡಪ್ಪನ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಆರ್ಜಿ ನಂಬರ್ 1044.

ದೊಡ್ಡಬಳ್ಳಾಪುರ ತಾಲ್ಲೂಕು ದೊಡ್ಡಮುದ್ದೇನಹಳ್ಳಿಲಿ ಇದ್ದು ಮೃತಪಟ್ಟ ಚನ್ನವೀರಯ್ಯನ ಹೆಂಡತಿ ಮುದ್ದಮ್ಮನ ಆಸ್ತಿ ವಿಷಯದಲ್ಲಿ—

ಅರ್ಜಿದಾರು ಗವುರಮ್ಮನು ಮೃತಪಟ್ಟ ಸದರೀ ಮುದ್ದಮ್ಮನಿಗೆ ಸಹೋದರಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಬಳ್ಳಾಪುರದ ಸ್ಥಳವ ವಾಬಸಂದ್ರದ ಗವುರಮ್ಮ ದೊಡ್ಡಬಳ್ಳಾಪುರ ತಾಲ್ಲೂಕು ದೊಡ್ಡಮುದ್ದೇನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಚನ್ನವೀರಯ್ಯನ ಹೆಂಡತಿ ಮುದ್ದಮ್ಮನ ಜೆಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಗವುರಮ್ಮನ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಕಿಮಾಡಿಲ್ಪಡುತ್ತೆ ಆ ಕಾಲದಲ್ಲಿ ಸದರೀ ಮೃತಪಟ್ಟ ಮುದ್ದಮ್ಮನ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಫಿಬ್ರವರಿ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ಮತ್ತು ನಮ್ಮದಸ್ತಖತ್ತೊಡನೇ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ದೇವಾಂಗದರಾಮಂಣನ ವ್ಯಾಟೇಲಿರತಕ್ಕ ವೆಂಕಟರಾವು ವಿಷಯದಲ್ಲಿ—

ಸ॥ 1888ನೇ ಇಸವಿ ದಿವಾಳಿ ಕೇಸ್ ನಂಬರ್ 944.

ಹುಕ್ಕುಂ.

ಮೇಲ್ಕಂಡ ವೆಂಕಟರಾವು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜೀರಾದ ಮೆ॥ ಶಿ. ಕೈಸ್ ಸಾಹೆಬರವರ ರೂಬರೂ ಅರ್ಜೀದಾರನಾದ ವೆಂಕಟರಾವು ಖುದ್ದಾಗಿದ್ದು ಮತ್ತು ಸದರೀಯವನ ಲೇಣೇದಾರ್‌ರಾದ 1ನೇ ಯವರ ತರಫ ಪ್ಲೀಡರ್ ಗಂಗಾಧರಯ್ಯನವರಿಗೂ ದರ್ಖಾಸ್ತ್ಪೀಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಖಾಸ್ತ್ಪೀ ನೋಟೀಸು ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ 2—3—4ನೇರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ವೆಂಕಟರಾವು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಿಲ್ಲಿ ಕಂಡ ಯಾವ ಸೂಲಕ್ಕೂ ಸ್ಥಕ್ತರವಾಗಿಯಾಗಲಿ ವಸ್ತಗಿರೀಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1889ನೇ ಇಸವಿ ಜನವರಿ 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನೀಂ ನಮ್ಮದಸ್ತಖತ್ತೊಡನೇ ಕೊಡೋಣಾಗಿದೆ.

ಸೂಲದಪಟ್ಟಿ.

ನಂಬರ್.	ಲೇಣೇದಾರು) ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.	ಯಾವಾಗ ದೇಣೇ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಟಿಪ್ಪಣಿ.
1	ಬೆಂಗಳೂರು ತೆಲಗರವ್ಯಾಟೇಲಿರತಕ್ಕ ಜಗೆ ನಂ ಜುಂಡಪ್ಪ	166 2 0	1888	ಬೆಂಗಳೂರು ಮುನಿಶೀಫ್ ಕೋರ್ಟು ಅರಿಜಿನಲ್ 156ನೇ ಡಿಕ್ರಿ ಬಾ॥	
2	ಡಿಟೋ ನಗರ್ತರ ವ್ಯಾಟೇ ಚಿಕ್ಕಪುಟ್ಟಂಣ ..	100 0 0	1887	ಡಿಟೋ 387ನೇ ಡಿಕ್ರಿ ಬಾಬತು	
3	ಡಿಟೋ ಕಮರ್ಷಿಯಲ್ ಬ್ಯಾಂಕು ..	135 13 0	1883	ಬೆಂಗಳೂರ್ ಸಬ್‌ಕೋರ್ಟು ಸ್ಮಾ॥ 180ನೇ ಡಿಕ್ರಿ ಬಾಬತು	
4	ಡಿಟೋ ಹಿಂದೂ ಬ್ಯಾಂಕು ..	140 0 0	..	ಪ್ಯಾಂಸರಿ ಬಾಬತು	
	ಜುಮ್ಲಾ ..	541 15 0	..		

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಅತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡಿಪ್ಯುಟಿ ಕಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಪೇಲೆನಲ್ಲಾಗಲಿ ಅಂದಾಜಾ ಬೀಜವರೀ ವಿಷಯದ ಲ್ಲಾಗಲಿ, ಇರುವ ಗಲ್ಲತ್‌ಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಜ್ಞೆರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾಡಬೇಕಾದ ಕ್ವಿಜೇರಿಜ.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಪೈಸೆ ಪೆರೆಂಟೆ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
				ಎಕರೆ. ಸೆಂ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ನೆಲಮಂಗಲ.	ನೆಲಮಂಗಲ.	ಜೋಡಿಬೈಯ್ಯಂಡಹಳ್ಳಿ	ವಾಸುದೇವಾಚಾರ್ ವಗೈರೆ	330 25 0	367 0 0	225 1 0	299 2 9 ಮತ್ತು ಬಡ್ಡಿವ ಬಾಕಿ ಯಿರುವ ಸಾಲ್ ಮಜಕೂರ್ ಜೋಡೀ ಸುದಾ	ಮುಂದಿನ ತಿಂಗಳು 24ನೇ ತಾರೀಖಿನ ಕಛೇರಿಯಲ್ಲಿ ತಾಲ್ಲೂಕು ಕಮಲೆದಾರ್‌ರೂಬರೂ.
		ಕಾಯಂಗುತ್ತಾ	ಮಜದೇವರಾವ್ ವೆಂಕಟರಾವ್	ಖಂ. ಕೂ. ಪ. 12 17 3¼	62 8 9	48 14 0	168 11 0 ಮತ್ತು ಬಡ್ಡಿವ ಬಾಕಿಯಿರುವ ಸಾಲ್‌ಮಜಕೂರಿನ ಕಾಯಂಗುತ್ತಾ ಮೊಬಲಗ್ ಸುದಾ	ಡಿಟೋ
		ಕಾಯಂಗುತ್ತಾ ಯಕ	ಡಿಟೋ	12 5 0	104 7 0	81 13 0	248 13 3 ಮತ್ತು ಬಡ್ಡಿವ ಬಾಕಿಯಿರುವ ಸಾಲ್ ಮಜಕೂರಿನ ಗುತ್ತಿಗೆ ಮೊಬಲಗ್ ಸುದಾ	ಡಿಟೋ
		ಜೋಡಿ ಚನ್ನತಿಮ್ಮನ ಗೊಲ್ಲಹಳ್ಳಿ	ರಾಮಲಿಂಗಭಟ್ಟು ಮತ್ತು ಮುತಕೂರು ಪಾವಂಣ	17 14 15¾	77 0 0	76 9 1	236 12 8 ಮತ್ತು ಬಡ್ಡಿವ ಬಾಕಿಯಿರುವ ಸಾಲ್ ಮಜಕೂರಿನ ಜೋಡೀ ಮೊಬಲಗು ಸುದಾ	ಡಿಟೋ

ಸೂಚನೆ.—ಜೋಡೀದಾರರುಗಳಿಂದಲಾಗಲಿ, ಬಾಧ್ಯತೆಯು ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ, ಉಂಟುಮಾಡಲ್ಪಟ್ಟ ತವಾಂ ಹಿಡುವಳಿಗಳಿಗೂ, ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟವದಿಲ್ಲ.

ತಾರೀಖು 13ನೇ ಮಾರ್ಚಿ 1889.

ಕ್ಯಾಂಪ್ ನಂ. 2047.—ಈ ಮೈಸೂರು ಸಂಸ್ಥಾನದ ತವಾಂ ಅಂಚೇ ವಿಭಾಗುಗಳೂ 1889ನೇ ಇಸವಿ ಏಪ್ರಿಲ್ 1ನೇ ತಾರೀಖು ಲಾಗಾಯತು ಇಂಪೀರಿಯಲ್ ಪೋಸ್ಟಲ್ ಇಲಾಖೆಗೆ ವೊಪ್ಪಿಸಲ್ಪಡುವವು.

2. ಸದರೀ ಇಂಪೀರಿಯಲ್ ಪೋಸ್ಟಲ್ ಇಲಾಖೆಯೊಂದಿಗೆ ಮಾಡಲ್ಪಟ್ಟಿರುವ ವಿಭಾಗಿನ ದೆಕೆಯಿಂದ 1889ನೇ ಇಸವಿ ಏಪ್ರಿಲ್ 1ನೇ ತಾರೀಖು ಲಾಗಾಯತು ಈ ಮೈಸೂರು ಸಂಸ್ಥಾನದ ಸರ್ಕಾರೀ ಕಾಗದಪತ್ರಗಳು, ಸಂಸ್ಥಾನ ಮಜಕೂರಿನೊಳಗೆ ಹಾಲೀ ಸ್ಥಳಿಕ ಅಂಚೇ ಮೂಲಕ ರವಾನೆ ಆಗುತ್ತಿರುವ ಮೇರೆಗೇನೇ, ಇಂಪೀರಿಯಲ್ ಪೋಸ್ಟಲ್ ಇಲಾಖೆ ಮೂರೀಫತ್ತು ಬಗರ್ ಹಾಸಲ್ ರವಾನಿಸಲ್ಪಡುವವು ಈ ಸಂಸ್ಥಾನದ ಆಜ್ಞೆಗೆ ರವಾನಿಸಲ್ಪಡುವ ಸರ್ಕಾರೀ ಕಾಗದಪತ್ರಗಳು ಅದಕ್ಕಾಗಿ ವಿಧಿಸಲ್ಪಟ್ಟಿರುವ ಸರ್ಕಾರೀ ಪೋಸ್ಟೇಜ್ ಹಾಸಲ್ ಪಾವತಿಯಾದ ಮೇಲೆ ಇಂಪೀರಿಯಲ್ ಪೋಸ್ಟಿನ ಮೂಲಕ ರವಾನಿಸಲ್ಪಡುವವು.

63

ತಾರೀಖು 2ನೇ ಮಾರ್ಚಿ 1889.

ನಂ. 224.—ಇಂಡ್ಯ ಗವರ್ನಮೆಂಟಿನವರ ಫಾರ್ಮ ಇಲಾಖಾ 1879ನೇ ಇಸವಿ ಸೆಪ್ಟಂಬರ್ 4ನೇ ಮಕ್ಕಂ 246ನೇ ನಂಬರ್ ಉಳ್ಳ ಇಸ್ತಿಹಾರನಾಮೆಯಿಂದ ಮೈಸೂರು ದೇಶಕ್ಕೆ ಜಾರೀಲಿತರಲ್ಪಟ್ಟ 1870ನೇ ಇಸವಿಯ ಪ್ರಿಜನ್ಸ್ ಆಕ್ಟಿನ 54ನೇ ಸೆಕ್ಷನ್ನಿಂದ ಉಂಟು ಮಾಡಲ್ಪಟ್ಟ ಅಧಿಕಾರಗಳನ್ನನುಸರಿಸಿ, ಶ್ರೀಮರ್ ಮಹಾರಾಜಾ ಸ್ಥರ್ತಾರದವರು, ಮೈಸೂರು ದೇಶದಲ್ಲಿ ತಹ ಉಂಮರ್ ಸಜಾ ವಿಧಿಸಲ್ಪಟ್ಟ ಖೈದಿಗಳ ವಿಷಯದಲ್ಲಿ ಇದರಡಿ ಕಂಡ ನಿಬಂಧನೆಗಳನ್ನು ಮಂಜೂರ್ಮಾಡಿರುತ್ತಾರೆ.

ನಿಬಂಧನೆಗಳು.

I.

1. ತಹ ಉಮ್ಮರ್ ಸಜಾ ವಿಧಿಸಲ್ಪಟ್ಟ ಪ್ರತಿ ಒಬ್ಬ ಖೈದಿಯನ್ನೂ, ಅವನು ಜೈಲ್‌ನಲ್ಲಿ 16 ವರುಷಗಳು ಪೂರ್ತಿಮಾಡಿ ಮತ್ತು ಅವನ ಚಾಲ್ ಚಲ್ಗ ಸರಿಯಾಗಿದೆ ಯಂಬ ಸೂಪರ್‌ಟೆಂಡೆಂಟರ ರಿಪೋರ್ಟಿನ ಮೇಲೆ ಆತನನ್ನು ಈ ನಿಬಂಧನೆಗಳ ಪ್ರಯೋಜನಕ್ಕಾಗಿ ಇನ್ನುಮೇಲೆದಾಖಲ್ಮಾಡುವ ಬಗ್ಗೆ ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್‌ಯವರು ಇದರ ದಕೆಯಿಂದ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

2. ಈ ನಿಬಂಧನೆಗಳಿಗೆ ಲಗಾವಾದ ಖೈದಿಗಳು, ಇನ್‌ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿನಿಃ ಸೆಂಟ್ರಲ್ ಜೈಲಿನ ಸೂಪರ್‌ಟೆಂಡೆಂಟರಿಂದ ವಿಧಿಸಲ್ಪಡಬಹುದಾದ ಬೇರೆ ಉಡುಪನ್ನು ಧರಿಸತಕ್ಕದ್ದು.

3. ಅವರು (ಖೈದಿಗಳು) ಜೈಲಿನ ಆವರಣದ ವಳಗೆ ಮಲಗುವ ಬಗ್ಗೆ ಅವಕಾಶ ಕೊಡಲ್ಪಡತಕ್ಕದ್ದು.

4. ಈ ನಿಬಂಧನೆ ಅನುಸರಿಸಿ ಖೈದಿಗಳು ಮಲಗುವಂಥಾ ವಂದೇಬಾರ್‌ಕೋಸಿನಲ್ಲಿಯೇ ಸ್ಥಳ ಕೊಡಲ್ಪಡಬಹುದು.

5. ಸದರೀ ಖೈದಿಗಳು ಜೈಲ್ ಸೂಪರ್‌ಟೆಂಡೆಂಟರವರ ಯುಕ್ತಾನುಸಾರ ಅವರವರ ಕಸಬು ನಡಿಸುವ ಬಗ್ಗೆ ಅವಕಾಶ ಕೊಡಲ್ಪಡತಕ್ಕದ್ದು. ಮತ್ತು ಅಂಥಾ ಸಂದರ್ಭದಲ್ಲಿ ಅವರ ಸಂಪಾದನೇ ಪೈಕಿ ಅರ್ಧ ಅವರಿಗೆ ಕೊಡಲ್ಪಡತಕ್ಕದ್ದು, ಅಥವಾ ಖೈದು ನೌಕರರಂತೆ ನೇಮಿಸಲ್ಪಟ್ಟು ಆಖೈರು ದರ್ಜೆಯ ಜವಾನನ ತಲಬಿಗೆ ಅರ್ಧಕ್ಕೆ ಸಮನಾದ ತಲಬು ಪಾವತಿ ಮಾಡಲ್ಪಡತಕ್ಕದ್ದು.

6. ಈ ನಿಬಂಧನೆಗಳು ಅನುಸರಿಸಿ ಖೈದಿಗಳು, ಅವರ ಆಹಾರದ ವಿಷಯದಲ್ಲಿ ಸೂಪರ್‌ಟೆಂಡೆಂಟರವರ ಶಿಫಾರಸಿನಮೇಲೆ ಇನ್‌ಸ್ಪೆಕ್ಟರ್ ಜನರಲ್ಲವರಿಂದ ಮಂಜೂರ್ಮಾಡಲ್ಪಡಬಹುದಾದಂಥಾ ವಿಶೇಷ ರಿಯಾಯತಿಗಳಿಗೆ ಅವಕಾಶ ಕೊಡಲ್ಪಡತಕ್ಕದ್ದು.

7. ಈ ನಿಬಂಧನೆಗಳು ಅನುಸರಿಸಿ ಖೈದಿಗಳು, ಜೈಲ್ ಸೂಪರ್‌ಟೆಂಡೆಂಟರವರ ಯುಕ್ತಾನುಸಾರ ಮೇಲೆ ಖೈದಿಗಳ ಮಾಲ್ ರಜಿಷ್ಟರ್ ಬುಕ್ಕಿನಲ್ಲಿ ಅವರ ಲೆಖ್ಖಕ್ಕೆ ಜಮೆಯಾಗಿ ಯಿರುವ ಮೊಬಲಗು ಪೈಕಿ ಕೆಲವನ್ನು ಅವರ ಬಂಧುಗಳಿಗೆ ಕಳುಹಿಸುವ ಬಗ್ಗೆ ಅವಕಾಶ ಕೊಡಲ್ಪಡತಕ್ಕದ್ದು.

8. ಅವರು ಆವರ ಬಂಧುಗಳನ್ನು ನೋಡುವ ಬಗ್ಯಾಗಲಿ ಅಥವಾ ಅವರಿಗೆ ಕಾಗದ ಬರಿಯುವ ಬಗ್ಯಾಗಲಿ ಮೂರು ತಿಂಗಳ್ಗೆ ಒಂದಾವರ್ತಿ ಅವಕಾಶ ಕೊಡಲ್ಪಡತಕ್ಕದ್ದು. ಅವರ ಬಂಧುಗಳ ಭೇಟಿಯು, ಜೈಲ್ ಸೂಪರ್‌ಟೆಂಡೆಂಟರವರು ಗೊತ್ತು ಮಾಡಬಹುದಾದಂಥಾ ಕಾಲದಲ್ಲಿಯೂ ಸ್ಥಳದಲ್ಲಿಯೂ ನಡೆಯತಕ್ಕದ್ದು.

9. ಅವರು ಉದ್ಯೋಗ ಪರರಾಗಿಯೂ ಅವರ ಕೆಲಸಗಳಿಗೆ ಯಾ ಅವರಿಗೆ ನಿಯಮಿಸಲ್ಪಟ್ಟ ಕಾರ್ಯಗಳಲ್ಲಿ ಶ್ರದ್ಧೆಯುಳ್ಳವರಾಗಿಯೂ ಯಿರತಕ್ಕದ್ದು. ಅವರು ಜೈಲ್ ನಿಬಂಧನೆಗಳನ್ನು ಉಲ್ಲಂಘಿಸಕೂಡದು ಅಥವಾ ಉಲ್ಲಂಘಿಸುವ ಬಗ್ಯೆ ಕುಮ್ಮಕ್ಕು ಮಾಡಕೂಡದು.

10. ಯಾವದಾದರೂ ದುರ್ನಡತೆ ಯಾ ಹುಕುಂಗಳ ಅವಿಧೇಯತೆಗೋಸ್ಕರ ಜೈಲ್ ಸೂಪರ್‌ಟೆಂಡೆಂಟರವರು, ಇನ್‌ಸ್ಪೆಕ್ಟರ್ ಜನರಲ್ಲವರ ಮಂಜೂರಾತಿನಿಃ ಅವರನ್ನು ಜೈಲಿಗೆ ದಾಖಲ್ಮಾಡಿ ಅವರ ಸಜಾ ವಾಯಿದೆ ಪರಿಯಂತರ ಅವರನ್ನ ಜೈಲಿನಲ್ಲಿ ಯಿಡುವ ಬಗ್ಯೆ ಅಧಿಕಾರಕೊಡಲ್ಪಟ್ಟು ಯಿರುತ್ತಾರೆ.

11. ಈ ನಿಬಂಧನೆಗಳ ಪ್ರಯೋಜನಕ್ಕೆ ದಾಖಲ್ಮಾಡಲ್ಪಟ್ಟ ಖೈದಿಗಳು, ಅವರ ಚಾಲ್ ಚಲ್ಗ ಸರಿಯಾಗಿದ್ದ ಪಕ್ಷದಲ್ಲಿ ಎರಡು ವರುಷಗಳ ಕಾಲ ಕಳೆದ ತರುವಾಯ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 47ನೇ ಸೆಕ್ಷನ್ನಿನಿಂದ ಗವರ್ನಮೆಂಟಿಗೆ ಉಂಟು ಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವಲ್ಲಿ 2ನೇ ನಿಬಂಧನೆಯಲ್ಲಿ ಉದಹರಿಸಲ್ಪಟ್ಟ ಷರತ್ತುಗಳ ಮೇಲೆ ಜೈಲ್‌ನಿಂದ ಖುಲಾಸೇ ಮಾಡಲ್ಪಡತಕ್ಕದ್ದು.

II.

1. ಸೂಪರ್‌ಟೆಂಡೆಂಟರವರು ಪ್ರತಿ ಖೈದಿಗೂ ಆವನ ಖುಲಾಸೇ ಕಾಲವಲ್ಲಿ ವಂದು ಟಿಕೆಟ್ಟು ಕೊಡತಕ್ಕದ್ದು. ಸದರೀ ಟಿಕೆಟ್ಟಿನಲ್ಲಿ ಅವನ ಚಹರೆಯ ತಪ್ಶೀಲು ಮತ್ತು ಅವನ ಸಜಾ ಮುಫಸ್ಸಲ್ ಮಾಡಲ್ಪಟ್ಟ ಷರತ್ತುಗಳು ಸಹ ಇಂಗ್ಲೀಷಿನಲ್ಲಿಯೂ ದೇಶಭಾಷೆಯಲ್ಲಿಯೂ ಬರೆದು ಯಿರತಕ್ಕದ್ದು.

2. ಚಹರೇಪಟ್ಟಿ ಮತ್ತು ಟಿಕೆಟ್ಟು ಸಪ ಇದಕ್ಕೆ ಕೀರಿನಲ್ಪಟ್ಟ ನಮೂನೆಯಲ್ಲಿ ಇರತಕ್ಕವು. ಸದರೀ ಟಿಕೆಟ್ಟು ಇಬ್ಬರುಸಾಕ್ಷಿಗಳ ಸಮಕ್ಷವು ಖೈದಿಯಿಂದ ರುಜು ಮಾಡಲ್ಪಟ್ಟು ಜೈಲ್ ಸೂಪರ್‌ಟೆಂಡೆಂಟರವರಿಂದ ಕವ್ಂಟರ್‌ಸೈನು ಮಾಡಲ್ಪಡತಕ್ಕದ್ದು.

3. ಟಿಕೇಟ್ಟು ರಜಾ ಮೇಲೆ ಖುಲಾಸೇ ಮಾಡಲ್ಪಟ್ಟ ಒಬ್ಬ ಖೈದಿಯು, ಅವನು ನೇಕ್ಕಾಲಿನಲ್ಲಿ ಇರುವ ವರೆಯಂತ ಪೊಲೀಸಿನವರಿಂದ ಉದ್ಯೋಗ ಸಂಪಾದಿಸುವದರಲ್ಲಿ ಕುಮ್ಮಕು ಮಾಡಲ್ಪಡತಕ್ಕದ್ದು.

4. ಖುಲಾಸೇ ಕಾಲದಲ್ಲಿ ಜೈಲ್ ಸೂಪರ್ಟಿಂಡೆಂಟರವರು ಖೈದಿಗೆ ಸದರೀ ಖೈದಿಯ ಮೂಲ ರೆಜಿಸ್ಟರ್‌ನಲ್ಲಿ ಜಮಾದಾಖಲಾಗಿರುವ ಮೊಬಲಗು ಪೈಕಿ ಅವನ ಸ್ವಂತ ಊರಿಗೆ ಯಾ ವಾಸಸ್ಥಾನಕ್ಕೆ ಹೋಗಿ ಕೀರುವ ಬಗ್ಯಾಗಿ ತಕ್ಕಷ್ಟು ಮೊಬಲಗನ್ನು ಸಾವತಿ ಮಾಡತಕ್ಕದ್ದು. ಆವನ ಜಮೆಯಲ್ಲಿ ಇರುವ ಬಾಕಿ ಮೊಬಲಗು ಡಿಸ್ಟ್ರಿಕ್ಟು ಪೊಲೀಸ್ ಸೂಪರ್ಟಿಂಡೆಂಟರಿಗೆ ಕಳುಹಿಸಲ್ಪಡತಕ್ಕದ್ದು. ಸದರೀ ಆಫಿಸರರು ಆ ಮೊಬಲಗನ್ನು ಖುಲಾಸೆಯಾದ ಖೈದಿಯ ಸಂರಕ್ಷಣೆಗಾಗಲಿ ಅಥವಾ ಅವನೆನ್ನು ಅವನ ಕಸಬಿನಲ್ಲಿ ಪ್ರವರ್ತಿಸುವ ಬಗ್ಯಾಗಲಿ ಉಪಯೋಗಿಸತಕ್ಕದ್ದು.

5. ಖುಲಾಸೇ ಕಾಲದಲ್ಲಿ ಖೈದಿಯು ಜಮೇ ಲೆಕ್ಕದಲ್ಲಿ ಇರತಕ್ಕ ಮೊಬಲಗು ಅವನು ಅವನ ಊರು ತಲಪುವದಕ್ಕೂ ಮತ್ತು ಅವನ ಕಸಬಿನ ಸಾಮಾನುಗಳನ್ನು ಹೊಂದುವ ಬಗ್ಯೂ ಸಾಲದೆ ಇದ್ದ ಪಕ್ಷದಲ್ಲಿ ಜೈಲ್ ಸೂಪರ್ಟಿಂಡೆಂಟರವರು ಸದರೀ ಖೈದಿಯು ಬಂದೀಖಾನೆಯಲ್ಲಿ ಇರುವ ಕಾಲದಲ್ಲಿ ಉಪಯೋಗಿಸುತ್ತಿದ್ದ ಆಯುಧಗಳನ್ನು ಅವನಿಗೆ ಕೊಡುವದಕ್ಕೆ ಸ್ವತಂತ್ರವಾಗಿರುತ್ತಾರೆ.

6. ಖುಲಾಸೇ ಕಾಲದಲ್ಲಿ ಸದರೀ ಖೈದಿಯ ಟಿಕೆಟ್ಟಿನಲ್ಲಿ ಕಂಡ ಷರತ್ತುಗಳು ಅವನಿಗೆ ಸ್ಪಷ್ಟವಾಗಿ ವಿವರಿಸಲ್ಪಟ್ಟು ಮತ್ತು ಅವನಿಂದ ಬರಹಮೂಲಕ ಒಪ್ಪಲ್ಪಡತಕ್ಕದ್ದು.

7. ಸದರೀ ಖೈದಿಯು ಪ್ರಥಮತಃ ಅವನ ಡಿಸ್ಟ್ರಿಕ್ಟಿನ ಪೊಲೀಸ್ ಸೂಪರ್ಟಿಂಡೆಂಟರಿಗಾಗಲಿ ಆವರ ಗೈರ್ ಹಾಜರಿಯಲ್ಲಿ ಅತ್ಯಂತ ಸಮೀಪದಲ್ಲಿನ ಮಾಜಿಸ್ಟ್ರೇಟರಿಗಾಗಲಿ ಖುದ್ದು ರಿಪೋರ್ಟು ಮಾಡತಕ್ಕದ್ದು.

8. ಖೈದಿಯು ಲೀವ್ ಟಿಕೆಟ್ಟಿನಲ್ಲಿ ಉದಹರಿಸಲ್ಪಟ್ಟ ಯಾವ ಷರತ್ತುಗಳನ್ನಾದರೂ ಪೂರ್ತಿ ಮಾಡುವದಕ್ಕೆ ತಪ್ಪಿದರೆ, ಶ್ರೀಮಂತ ಮಹಾರಾಜಾ ಸರ್ಕಾರದವರು ಅವನ ದಂಡನೆಯ ಮಾಫಿಯನ್ನು ರದ್ದು ಮಾಡಬಹುದು, ಆದರೆ ಮೇಲೆ ಅವನು ಯಾವ ಪೊಲೀಸ್ ಆಫಿಸರನಿಂದಾದರೂ ವಾರಂಟು ಇಲ್ಲದೆ ದಸ್ತಗಿರಿ ಮಾಡಲ್ಪಟ್ಟು ಅವನ ಒರಿಜಿನಲ್ ಸಜಾ ಅನುಭವಿಸುವ ಬಗ್ಯಾಗಿ ಖೈದ್ ಮಾಡಲ್ಪಡಬಹದು.

9. ಖೈದಿಯು ಲೀವ್ ಟಿಕೆಟ್ಟಿನ ಮೇಲೆ ಖುಲಾಸೇ ಮಾಡಲ್ಪಟ್ಟ ಪ್ರತಿ ಸಂದರ್ಭದಲ್ಲೂ ಈ ರೂಲ್ಸಿನ ನಕಲು ಖೈದಿಯು ಟಿಕೆಟ್ಟಿನ ನಕಲೂ ಸುದಾ, ಖೈದಿಯು ಖುಲಾಸೇ ಮಾಡಲ್ಪಟ್ಟ ಜೈಲಿನ ಸೂಪರ್ಟಿಂಡೆಂಟರವರಿಂದ ಸದರೀ ಖೈದಿಯು ವಾಸಮಾಡಬಹುದಾದ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗೂ ಮತ್ತು ಡಿಸ್ಟ್ರಿಕ್ಟು ಪೊಲೀಸ್ ಸೂಪರ್ಟಿಂಡೆಂಟರಿಗೂ ಕಳುಹಿಸಲ್ಪಡತಕ್ಕದ್ದು.

ಲೀವ್ ಟಿಕೆಟ್ಟಿನ ನಮೂನೆ.

18 ನೇ ಇನವಿಯ ನೇ ನಂಬರ್ ಲೀವ್ ಟಿಕೆಟ್.

a. ಖೈದಿಯ ಹೆಸರು
b. ತಂದೆ ಹೆಸರು
c. ವಯಸ್ಸು ವರುಷ ತಿಂಗಳು
d. ಯತ್ತರ ಅಡಿ ಅಂಗುಲ
e. ಜಾತಿ ಯಾ ಮತ
f. ಕಸಬು ಯಾ ಉದ್ಯೋಗ
g. ಗ್ರಾಮ ತಾಲ್ಲೂಕು ಡಿಸ್ಟ್ರಿಕ್ಟು
h. ಖೈದಿಯು ತಕ್ಸೀರ್.
i. ಸಜಾ.
j. ಅನುಭವಿಸಿದ ಸಜಾ ವರುಷ ತಿಂಗಳು
k. ಅನುಭವಿಸದೇ ಇರುವ ಸಜಾ ವರುಷ. ತಿಂಗಳು
l. ಮೈಮೇಲಿನ ಚಹರೆ ವಗೈರೆ ಹೆಗ್ಗುರ್ತುಗಳು

ತಾರೀಖು

ಜೈಲ್ ಸೂಪರ್ಟಿಂಡೆಂಟ್.

ಕ್ರಿಮಿನಲ್ ಪ್ರೊಸೆಡ್ಯೂರ್ ಕೋಡಿನ 401ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರವನ್ನು ಚಲಾಯಿಸುವದರಲ್ಲಿ ಶ್ರೀಮಂತ ಮಹಾರಾಜಾ ಸರ್ಕಾರದವರು ಇದರ ಮುಂದೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟು ಹಾಲಿ ಜೈಲಿನ ಸಜಾ ಅನುಭವಿಸುತ್ತಾ ಇರುವ ನ ಮಗನಾದ ಖೈದಿ ಗೆ ವಿಧಿಸಲ್ಪಟ್ಟ ಸಜಾವನ್ನು ಇದರ ದೆಸೆಯಿಂದ ಮಾಫ್ ಮಾಡಿರುತ್ತಾರೆ.

ಷರತ್ತುಗಳ್ಯಾವವೆಂದರೆ.

1ನೇದು—ಸದರೀ ನು ಈ ತಾರೀಖು ಲಾಗಾಯತು ದಿವಸಗಳೊಳಗಾಗಿ ಸ್ಥಳದಲ್ಲಿನ ಡಿಸ್ಟ್ರಿಕ್ಟು ಪೊಲೀಸ್ ಸೂಪರ್ಟಿಂಡೆಂಟರಿಗಾಗಲಿ ಅವರು ಹಾಜರಿಲ್ಲದ ಪಕ್ಷದಲ್ಲಿ ಸದರೀ ಸ್ಥಳದ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗಾಗಲಿ ರೂಬರೂ ಖುದ್ದು ಹಾಜರಾಗಿ ಈ ಲೀವ್ ಟಿಕೆಟ್ಟನ್ನ ತೋರಿಸತಕ್ಕದ್ದು.

2ನೇದು—ಮತ್ತು ಸದರೀಯವನು ಆ ಲಾಗಾಯತು ತಾನು ವಾಸ ಮಾಡುವ ಡಿಸ್ಟ್ರಿಕ್ಟಿನ ಪೊಲೀಸ್ ಸೂಪರ್‌ಟೆಂಡೆಂಟರವರಿಂದ ನಿಯಮಿಸಲ್ಪಡುವ ಕಾಲದಲ್ಲೂ ವ ಸ್ಥಳದಲ್ಲೂ ತಿಂಗಳಿಗೊಂದಾವರ್ತಿ ಖುದ್ದು ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟೆಂಡೆಂಟರವರ ಅಥವಾ ಅವರು ಮೊಕರರ್ ಮಾಡುವಂಥಾ ಇತರ ಆಫಿಸರರ ರೂಬರೂ ಹಾಜರಾಗತಕ್ಕದ್ದು.

3ನೇದು—ಸದರೀಯವನು ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟೆಂಡೆಂಟರವರ ಯಾ ಅವರ ಗೈರ್ ಹಾಜರಿಯಲ್ಲಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರ ಬರಹ ಮೂಲಕವಾದ ಹುಕುಂ ವಿನಹ ಡಿಸ್ಟ್ರಿಕ್ಟನ್ನು ಬಿಡಕೂಡದು.

4ನೇದು—ಸದರೀಯವನು ಯಾವ ಷರತ್ತುಗಳಿಗೆ ಒಳಪಟ್ಟು ಹಾಂಗೆ ಹುಕುಂ ಕೊಡಲ್ಪಡುತ್ತೋ ಅಂಥಾ ಷರತ್ತುಗಳನ್ನ ಒಪ್ಪಿ ಕೊಂಡು ಅವು ಇದರಲ್ಲಿ ಅಡಗಿ ಇದ್ದರೆ ಹ್ಯಾಂಗೋ ಹಾಂಗೆ ಅವುಗಳ ಪ್ರಕಾರ ನಡೆದುಕೊಳ್ಳತಕ್ಕದ್ದು.

5ನೇದು—ಸದರೀಯವನು ಮೈಸೂರು ಸೀಮೆಯಲ್ಲಿ ಜಾರೀ ಯಿರುವ ಯಾವ ಕಾನೂನ್ನಿಂದಾದರೂ ಶಿಕ್ಷಿಸಲ್ಪಡಬಹುದಾದ ಯಾವ ದೊಂದು ತಪ್ಪೀರನ್ನೂ ಮಾಡಕೂಡದು.

6ನೇದು—ಸದರೀಯವನು ಪ್ರಸಿದ್ಧವಾಗಿ ದುರ್ನಡತೆಯುಳ್ಳ ಜನಗಳೊಂದಿಗೆ ಕೀರಕೂಡದು ಅಥವಾ ತಾನೇ ಬದಚಾಲಿಗೆ ಬೀಳ ಕೂಡದು.

7ನೇದು—ಸದರೀಯವನು ಈ ಷರತ್ತುಗಳನ್ನಾಗಲಿ ಯಿವುಗಳ ವೈಕಿ ಯಾವ ಭಾಗವನ್ನಾಗಲಿ ಉಲ್ಲಂಘಿಸಿದರೆ, ಶ್ರೀಮಂತ ಮಹಾರಾಜಾ ಸರ್ಕಾರದವರು, ಅವನ ದಂಡನೆಯ ಮಾಫೀ ಹುಕುಮನ್ನ ರದ್ದು ಮಾಡಬಹುದು, ತರುವಾಯ ಸದರೀಯವನು ವಾರಂಟೆ ಯಿಲ್ಲದೆ ಯೀ ಯಾವ ಪೊಲೀಸ್ ಆಫಿಸರನಿಂದಾದರೂ ದಸ್ತಗಿರಿ ಮಾಡಲ್ಪಟ್ಟು ಅವನ ಪ್ರಥಮ ಸಜಾವನ್ನ ಅನುಭವಿಸುವ ಬಗ್ಯಾಗಿ ಜೈಲಿಗೆ ಒಪ್ಪಿಸಲ್ಪಡಬಹುದು.

ಮೇಲೆ ಉದಹರಿಸಲ್ಪಟ್ಟ ಖೈದಿಯಾದ ನ ಮಗನಾದ ನಾದ ನಾನು, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 401ನೇ ಸೆಕ್ಷನ್ ಅನುಸರಿಸಿ ಮೇಲೆಕಂಡ ಷರತ್ತುಗಳನ್ನು ಒಪ್ಪಿಕೊಂಡಿರುತ್ತೇನೆ.

ಸಾಕ್ಷಿ.

ಖೈದಿಯ ರುಜು ಯಾ ಗುರ್ತು.

"

ಮೊಕ್ತಾಂ
ತಾರೀಖು

ಮೇಲೆಕಂಡ ನು ಗವರ್ನಮೆಂಟ್ ಹುಕುಂ ಅನುಸರಿಸಿ ಮೇಲೆ ನಮೂದಾದ ಷರತ್ತು ಮೇಲೆ ಜೈಲ್‌ಖಾನೆಯಿಂದ ಈದಿವಸ ಖುಲಾಸೇ ಮಾಡಲ್ಪಟ್ಟಿರುತ್ತಾನೆ.

ತಾರೀಖು ಜೈಲ್ ಸೂಪರ್‌ಟೆಂಡೆಂಟ್.

ಈ ಲೀವ್ ಟಿಕೆಟ್ಟು 188 ನೇ ಇಸವಿ ನೇ ತಾರೀಖಿನ ವರಿಗೆ ಜಾರಿಯಲ್ಲಿರುತ್ತೆ. ಆ ತರುವಾಯ ಜಾರಿ ಇಲ್ಲ.

ಮೇಲೆ ಕಂಡ ನ ಮಗನಾದ ನು 188 ನೇ ಇಸವಿ ಮಾಹೆ ನೇ ತಾರೀಖಿನಲ್ಲಿ ಅವನ ಹಾಜರಿಯನ್ನು ನನಿಗೆ ರಿಪೋರ್ಟು ಮಾಡಿರುತ್ತಾನೆ.

ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್‌ಟೆಂಡೆಂಟ್,
ಅಥವಾ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ಪೊಲೀಸ್ ಸ್ಟೇಷನಿಗೆ ಮಾಹೆಯಾನಾ ಹಾಜರಿ ರಿಪೋರ್ಟು ಮಾಡಿದ ತಾರೀಖು.

ತಾರೀಖು 13ನೇ ಮಾರ್ಚಿ 1889.

ಕ್ಯಾಂಪ್ ನಂ. 2048.—ಇದರಿಂದ ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಸ್ಟೇಟ್ ರೈಲ್ವೇ ಮಾರ್ಗದಲ್ಲಿ ಬೆಂಗಳೂರಿಗೂ ತುಮಕೂರಿಗೂ ಮಧ್ಯದಲ್ಲಿ ಸ್ಟೇಷನಾಗಿರುವ ಬಾಣಾವಾರದ ಗ್ರಾಮವು ಈ ಲಾಗಾಯತು "ಚಿಕ್ಕ ಬಾಣಾವರ" ವೆಂತಲೂ; ಹೊಳಲ್ಕೆರೆಗೂ ಚಿತ್ರದುರ್ಗಕ್ಕೂ ಮಧ್ಯದಲ್ಲಿ ಸ್ಟೇಷನಾಗಿರುವ ಜಾಜೂರು ಗ್ರಾಮವು "ಚಿಕ್ಕಜಾಜೂರು" ಯಂತಲೂ ಕರೆಯಲ್ಪಡತಕ್ಕದ್ದು.

ಸದರೀ ಹೆಸರುಗಳು ರವಿನ್ಯೂ ಲೆಜ್ಜೆಗಳಲ್ಲೂ ತಾಲ್ಲೂಕು ನಜರಿತದ ಕಾಗದ ಪತ್ರಗಳಲ್ಲೂ ಜಾರೀಲಿ ಬರತಕ್ಕದ್ದು.

ಬಿಮೋಜೇಟ್ ಹುಕುಂ,
ಆರ್. ವಿಜಯೀಂದ್ರರಾವ್.
ಚೀಫ್ ಸೆಕ್ರಿಟರಿ.